ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಸುಮಾರು 300 x 500 ಅಡಿಗಳು

ಆ) ಈ ಕೆರೆಯ ಪ್ರದೇಶದ ಬಹುತೇಕ ಪ್ರದೇಶವನ್ನು ಈಗಾಗಲೇ ಮುಚ್ಚಲಾಗಿದ್ದು ಉಳಿದ ಸ್ವಲ್ಪ ಪ್ರದೇಶದಲ್ಲಿ ಸೊಳ್ಳೆ ಹಾವಳಿ ನಿಯಂತ್ರಿಸಲು ಕಾಲಕಾಲಕ್ಕೆ ಕೀಟ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ.

ಇ) ಇದುವರೆಗೂ ಆ ರೀತಿಯ ಪ್ರಸ್ತಾವನೆ ಇಲ್ಲ.

ಕುಣಿಗಲ್ ತಾಲ್ಲೂಕ್ ಅಂಚೆಪಾಳ್ಯದಲ್ಲಿನ 220 ಕೆ.ವಿ. ವಿದ್ಯುತ್ ಕೇಂದ್ರದ ಕಾಮಗಾರಿ ವಿಳಂಬ.

6(152) ಶ್ರೀ ಎಸ್.ಪಿ ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುಣಿಗಲ್ ತಾಲ್ಲೂಕು ಅಂಚೆಪಾಳ್ಯದ 220 ಕೆವಿ. ಸಾಮರ್ಥ್ಯವುಳ್ಳ ವಿದ್ಯುತ್ ಕೇಂದ್ರದ ಕಾಮಗಾರಿ ಪೂರೈಸುವಲ್ಲಿ ಆಗುತ್ತಿರುವ ವಿಳಂಬಕ್ಕ ಕಾರಣಗಳೇನು?

ಆ) ಈ ಯೋಜನೆಯನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂದನ ರಾಜ್ಯ ಸಚಿವರು) :—

ಅ) ಕುಣಿಗಲ್ ತಾಲ್ಲೂಕು ಅಂಚೆಪಾಳ್ಯದಲ್ಲಿ ರೂ.1628-00 ಲಕ್ಷ ಅಂದಾಜು ವೆಚ್ಚದಲ್ಲಿ 2 x 100 ಎಂ.ವಿ.ಎ. 220:66 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಹಾಗೂ ಈ ವಿದ್ಯುತ್ ಕೇಂದ್ರಕ್ಕೆ ಸಂಬಂಧಿಸಿದಂತೆ 36.700 ಕಿ.ಮೀ. ದೂರಕ್ಕೆ ರೂ.860-00 ಲಕ್ಷ ಅಂದಾಜು ವೆಚ್ಚದಲ್ಲಿ 220 ಕೆ.ವಿ. ಜೋಡಿ ಮಾರ್ಗವನ್ನು ನಿರ್ಮಿಸುವ ಕಾರ್ಯಗಳಿಗೆ ಅನುಮೋದನೆಯನ್ನು ನೀಡಲಾಗಿದ್ದು, ನಿರ್ಮಾಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ನೆಲಮಂಗಲ ಪಟ್ಟಣದ ಹತ್ತಿರ ಕೆಲವೊಂದು ಸ್ಥಳಗಳಲ್ಲಿ ಮಾರ್ಗದ ಅಡಚಣೆಗಳಿರುವುದರಿಂದ ಹೂಗ ಹಲವು ಗೋಪುರಗಳನ್ನು ನಿರ್ಮಿಸಲು ಸ್ಟೋಟಿಸಿ ಕಾಂಕ್ರೀಟ್ ಹಾಕಬೇಕಾಗಿರುವುದರಿಂದ ನಿರ್ಮಾಣ ಕಾರ್ಯದಲ್ಲಿ ವಿಳಂಬವಾಗುತ್ತಿದೆ, ಅಲ್ಲದೇ ವಿದ್ಯುತ್ ಕೇಂದ್ರದ ಸ್ಥಾಪನೆಗೆ ಅವಶ್ಯಕವಾದ ಭೂಮಿಯನ್ನು ದಿನಾಂಕ : 26-6-97 ರಲ್ಲಿ ತಹಸೀಲ್ದಾರರಿಂದ ಸ್ವಾದೀನ ಪಡೆದುಕೊಂಡಿದ್ದರೂ ಸಹ ಕೆಲಸವನ್ನು

ಪ್ರಾರಂಭಿಸಲು ಭೂಮಿ ಮಾಲೀಕರು ತಕರಾರು ಹಾಗೂ ಅಡಚಣೆಗಳನ್ನು ಉಂಟು ಮಾಡಿದುದರಿಂದ, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಸತತ ಪ್ರಯತ್ನದಿಂದ ಹಾಗೂ ನ್ಯಾಯಾಲಯದ ತೀರ್ಪಿನ ಪ್ರಕಾರ ದಿನಾಂಕ : 13-6-1998 ರಂದು ಭೂಮಿತಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಮುಖ್ಯರಸ್ತೆಯಿಂದ ವಿತರಣಾ ಕೇಂದ್ರಕ್ಕೆ ಹೋಗುವ ರಸ್ತೆಯ ಭೂ ಸ್ವಾಧೀನದ ಬಗ್ಗೆಯೂ ತಕರಾರು ಇದ್ದು, ಈ ಸಮಸ್ಯೆಯನ್ನು ಈಗ ತಾನೇ ಬಗೆಹರಿಸಲಾಗಿದೆ. ಈ ಎಲ್ಲಾ ಮುಖ್ಯ ಕಾರಣಗಳಿಂದಾಗಿ ನಿರ್ಮಾಣ ಕಾರ್ಯದಲ್ಲಿ ವಿಳಂಬ ಉಂಟಾಯಿತು. 220 ಕೆ.ವಿ. ಪ್ರಸರಣಾ ಮಾರ್ಗಕ್ಕೆ ನಿರ್ಮಿಸಬೇಕಾಗಿರುವ ಒಟ್ಟು 137 ವಿದ್ಯುತ್ ಗೋಪುರಗಳ ಪೈಕಿ 115ಕ್ಕೆ ಸಬ್ ಕಾಂಕ್ರೀಟ್ ಹಾಕುವ ಕೆಲಸವನ್ನು ಮುಗಿಸಿದ್ದು, 72 ವಿದ್ಯುತ್ ಗೋಪುರಗಳನ್ನು ನಿರ್ಮಿಸಲಾಗಿದೆ. ವಿದ್ಯುತ್ ಕೇಂದ್ರದಲ್ಲಿ ಭೂ ಸಮತೋಲನ ಕೆಲಸ ಪೂರ್ಣಗೊಂಡಿದೆ. ಗಡಿ ರಕ್ಷಕ ಬೇಲಿಯನ್ನು ಹಾಕುವ ಕೆಲಸವು ಮುಕ್ತಾಯ ಹಂತದಲ್ಲಿದೆ. ನಿಯಂತ್ರಣಾ ಕೊಠಡಿ ಹಾಗೂ ಭೂ ಸಂಪರ್ಕ ಕೆಲಸಗಳು ಪ್ರಗತಿಯಲ್ಲಿವೆ. ಈ ವಿದ್ಯುತ್ ಕೇಂದ್ರದಲ್ಲಿ ಅಳವಡಿಸಬೇಕಾಗಿರುವ ಪರಿವರ್ತಕಗಳು ಸಹ ತಲುಪಿದ್ದು, ಬಾಕಿ ಉಳಿದಿರುವ ಕೆಲಸಗಳು ಭರದಿಂದ ಸಾಗುತ್ತಿದೆ.

ಆ) ನಿರ್ಮಾಣ ಕಾರ್ಯವು ಡಿಸೆಂಬರ್ 99 ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ವಿಷಯ :— ತುಮಕೂರು ಜಿಲ್ಲೆಯಲ್ಲಿರುವ ಮಸೀದಿಗಳ ದುರಸ್ತಿ ಬಗ್ಗೆ.

7(145) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ವಕ್ಫ್ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1998-99ನೇ ಸಾಲಿನಲ್ಲಿ ರಾಜ್ಯದಲ್ಲಿನ ಎಷ್ಟು ಮಸೀದಿಗಳನ್ನು ದುರಸ್ತಿ ಮಾಡಿಸಲಾಗಿದೆ?

2. ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು?

3. ಆ ಬಗ್ಗೆ ತುಮಕೂರು ಜಿಲ್ಲೆಯಲ್ಲಿ ಮಾಡಿರುವ ಪ್ರಗತಿಯ ವಿವರಗಳನ್ನು ಒದಗಿಸುವುದು.

ಶ್ರೀ ಆರ್. ರೋಷನ್ ಬೇಗ್ (ವಕ್ಫ್, ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ರಾಜ್ಯ ಸಚಿವರು) :—

1. 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ 579 ಮಸೀದಿಗಳಿಗೆ ದುರಸ್ತಿಗಾಗಿ ಹಣ ಮಂಜೂರು ಮಾಡಲಾಗಿದೆ.